# INDIAN ACADEMY OF PEDIATRICS

**KARNATAKA STATE BRANCH - 2021**

President
*Dr. Ashok R Datar*
94480 42689
datashok@gmail.com

Hon. Secretary
*Dr. Amaresh Patil K.*
94825 67678
amarpatilk@rediffmail.com

Central IAP President
*Dr. Piyush Gupta*

Central IAP HSG.
*Dr. Basavaraj G.V.*

CIAP Vice President South
*Dr. Major K. Nagaraju*

Historian
*Dr. Santosh Soans*


*Ref. No.:*

*Date : ................................*

## ಮಕ್ಕಳಲ್ಲಿ ಕೊರೊನಾ ವೈರಸ್ ಕಂಡುಬಂದಲ್ಲಿ

# ಪೋಷಕರಿಗೆ

# ಇರಲಿ ಮಾಹಿತಿ...


Address for correspondance : Bijoy Hospital, Opposite Little Flower Church, HOSPET - 583 201.
iapktk@gmail.com

| Original Words<br>(English) | Final translation<br>(Kannada) |
|---|---|
| Indian Academy of Pediatrics (IAP) | ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (ಐಎಪಿ) |
| Guidelines for Parents | ಪೋಷಕರಿಗಾಗಿ ಮಾರ್ಗ ಸೂಚಿಗಳು |
| Coronavirus Disease-2019 in Children—Information for Parents<br>(As on 25 April 2021) | ಮಕ್ಕಳಲ್ಲಿ ಕೊರೊನಾ ವೈರಸ್ ಕಾಯಿಲೆ–2019 –ಪೋಷಕರಿಗೆ ಮಾಹಿತಿ<br>(25 ಏಪ್ರೀಲ್ 2021ರಂತೆ) |
| **Writing Group:**<br>Mahesh A Mohite<br>Bakul Parekh<br>Deepak Ugra | **ಬರವಣಿಗೆ ಗುಂಪು:**<br>ಮಹೇಶ್ ಮೋಹಿತೆ<br>ಬಕುಲ್ ಪರೇಖ್<br>ದೀಪಕ್ ಉಗ್ರಾ |
| FAQs on CORONAVIRUS DISEASE-2019<br>INFORMATION FOR PARENTS | CORONAVIRUS DISEASE-2019 ನಲ್ಲಿನ FAQ<br>ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳ ಬಗ್ಗೆ ಪೋಷಕರಿಗೆ ಮಾಹಿತಿ |
| 1. Is the second wave more serious than the first wave last year? Why?<br>2. How can I prevent coronavirus infection/ COVID in my child?<br>3. Can we know whether fever in child is COVID or otherwise?<br>4. What are the common features of corona infection in children?<br>5. When do we test the child for coronavirus disease?<br>6. Which test should we take?<br>7. What may be the different situations in the family? How to manage them?<br>8. Is a mask necessary to be worn for children?<br>9. Can children become serious with corona infection?<br>10. Which children are at risk of serious disease?<br>11. How to take advice about care of my COVID positive child? | 1. ಕಳೆದ ವರ್ಷದ ಮೊದಲ ಅಲೆಗಿಂತಲೂ ಎರಡನೇ ಅಲೆ ಹೆಚ್ಚು ಗಂಭೀರವಾಗಿದೆಯೇ ? ಇದ್ದರೆ ಏಕೆ?<br>2. ನನ್ನ ಮಗುವಿನಲ್ಲಿ ಕರೋನ ವೈರಸ್ ಸೋಂಕು / (ಕರೋನಾ) ಅನ್ನು ನಾನು ಹೇಗೆ ತಡೆಯಬಹುದು?<br>3. ಮಗುವಿನಲ್ಲಿ ಜ್ವರವು ಕರೋನಾದ ಜ್ವರವೇ, ಅಲ್ಲವೇ ಎಂದು ತಿಳಿಯಬಹುದೇ?<br>4. ಮಕ್ಕಳಲ್ಲಿ ಕರೋನಾ ಸೋಂಕಿನ ಸಾಮಾನ್ಯ ಲಕ್ಷಣಗಳು ಯಾವುವು?<br>5. ಯಾವಾಗ ನಾವು ಮಗುವನ್ನು ಕರೋನ ಪರೀಕ್ಷೆಗೆ ಒಳಪಡಿಸಬೇಕು?<br>6. ನಾವು ಯಾವ ಪರೀಕ್ಷೆಯನ್ನು ಮಾಡಿಸಬೇಕು?<br>7. ಕುಟುಂಬದಲ್ಲಿನ ವಿಭಿನ್ನ ಸನ್ನಿವೇಶಗಳು ಯಾವುವು? ಅವುಗಳನ್ನು ಹೇಗೆ ನಿರ್ವಹಿಸುವುದು?<br>8. ಮಕ್ಕಳು ಮುಖಗವಸು ಧರಿಸುವುದು ಅಗತ್ಯವೇ?<br>9. ಕರೋನಾ ಸೋಂಕಿನಿಂದ ಮಕ್ಕಳು ಗಂಭೀರವಾಗಿ ಬಳಲಬಹುದೇ?<br>10. ಎಂತಹ ಮಕ್ಕಳು ಗಂಭೀರ ಕಾಯಿಲೆಯ ಸ್ವರೂಪ ಪಡೆಯುವ ಅಪಾಯದಲ್ಲಿದ್ದಾರೆ.<br>11. ನನ್ನ ಕೋವಿಡ್ ಸೋಂಕಿತ ಮಗುವಿನ ಆರೈಕೆಯ ಬಗ್ಗೆ ಸಲಹೆ ತೆಗೆದುಕೊಳ್ಳುವುದು ಹೇಗೆ? |

| | |
|---|---|
| 12. What is a home remedy that I can use for my child?<br>13. What about medicines such as azithromycin, ivermectin, doxycycline, hydroxychloroquine (HCQ), ayurvedic, homeopathic, etc.?<br>14. When do I consider my child serious?<br>15. My child is having chronic disease. Do I continue his steroid treatment/ other treatment?<br>16. Doctor, we heard about steroids, favipiravir, Remdesivir, tocilizumab, etc., when do we use them?<br>17. My child tested positive 1 week ago. He is due for his vaccine after 2 weeks. How do I go about it?<br>18. The mother is breastfeeding her baby, can she take COVID vaccine? | 12. ನನ್ನ ಮಗುವಿಗೆ ನಾನು ಬಳಸಬಹುದಾದ ಮನೆಮದ್ದು ಯಾವುದು?<br>13. ಅಜಿಥ್ರೊ ಮೈಸಿನ್, ಐವರ್ಮೆ ಕ್ಟಿನ್, ಡಾಕ್ಸಿಸೈಕ್ಲಿನ್, ಹೈಡ್ರಾಕ್ಸಿ ಕ್ಲೋರೋಕ್ವಿನ್ (ಎಚ್‌ಸಿಕ್ಯು ), ಆಯುರ್ವೇದ, ಹೋಮಿಯೋಪತಿ, ಇತ್ಯಾದಿಯಂತಹ ಔಷಧಿಗಳ ಬಗ್ಗೆ ಅಭಿಪ್ರಾಯ ಏನು? ಸ್ವಂತವಾಗಿ ಬಳಸಬಹುದೇ?<br>14. ನನ್ನ ಮಗುವಿನಲ್ಲಿ ಕಾಯಿಲೆ ಯಾವಾಗ ಉಲ್ಬಣಗೊಂಡಿದೆ ಎಂದು ತಿಳಿಯಬೇಕು?<br>15. ನನ್ನ ಮಗುವಿಗೆ ದೀರ್ಘ ಕಾಲದ ಕಾಯಿಲೆ ಇದೆ. ನಾನು ಅವನ ಸ್ಟೀರಾಯ್ಡ್ ಚಿಕಿತ್ಸೆ / ಇತರ ಚಿಕಿತ್ಸೆ ಮುಂದುವರಿಸಬಹುದೇ?<br>16. ವೈದ್ಯರೇ, ನಾವು ಸ್ಟೀರಾಯ್ಡುಗಳು, ಫೆವಿಪಿರವಿರ್, ರೆಮ್ಡಸವೀರ್ tocilizumab, ಇತ್ಯಾದಿ, ನಾವು ಇವುಗಳನ್ನು ಯಾವಾಗ ಬಳಸಬೇಕು?<br>17. ನನ್ನ ಮಗು ಒಂದು ವಾರದ ಹಿಂದೆ ಕೋವಿಡ್ ಪಾಸಿಟಿವ್ ಬಂದಿರುತ್ತದೆ. ಅವರ ಲಸಿಕೆ 2 ವಾರಗಳ ನಂತರ ಇದೆ. ಆಗ ಏನು ಮಾಡಬೇಕು?<br>18. ತಾಯಿ ತನ್ನ ಮಗುವಿಗೆ ಹಾಲುಣಿಸುತ್ತಿದ್ದಾಳೆ. ಅವಳು ಕೋವಿಡ್ ಲಸಿಕೆ ತೆಗೆದುಕೊಳ್ಳಬಹುದೇ? |
| Under the Auspices of the IAP Action Plan 2020–2021 | ಐಎಪಿ ಕ್ರಿಯಾ ಯೋಜನೆ 2020–2021ರ ಆಶ್ರಯದಲ್ಲಿ |
| IAP President 2021<br>Piyush Gupta | ಐಎಪಿ ಅಧ್ಯಕ್ಷ 2021<br>ಪಿಯೂಷ್ ಗುಪ್ತಾ |
| Remesh Kumar R<br>IAP President-Elect 2021 | ರಿಮೇಶ್ ಕುಮಾರ್ ಆರ್<br>ಐಎಪಿ ಅಧ್ಯಕ್ಷ–ಚುನಾಯಿತ 2021 |
| IAP President 2020<br>Bakul Parekh | ಐಎಪಿ ಅಧ್ಯಕ್ಷ 2020<br>ಬಕುಲ್ ಪರೇಖ್ |
| GV Basavaraja<br>IAP HSG 2020–2021 | ಜಿ.ವಿ.ಬಸವರಾಜ<br>ಐಎಪಿ ಎಚ್‌ಎಸ್‌ಜಿ 2020–2021 |
| Deepak Ugra<br>National Coordinator | ದೀಪಕ್ ಉಗ್ರಾ<br>ರಾಷ್ಟ್ರೀಯ ಸಂಯೋಜಕ |
| © Indian Academy of Pediatrics | © ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ |
| IAP Parent Guideline Committee | ಐಎಪಿ ಪೋಷಕ ಮಾರ್ಗದರ್ಶಿ ಸಮಿತಿ |
| **Chairpersons:** Piyush Gupta, Bakul Parekh<br>**IAP Co-ordinators:** GV Basavaraja, Harish Kumar Pemde, Purna Kurkure | **ಅಧ್ಯಕ್ಷರು:** ಪಿಯೂಷ್ ಗುಪ್ತಾ, ಬಕುಲ್ ಪರೇಖ್<br>**ಐಎಪಿ ಸಂಯೋಜಕರು:** ಜಿ.ವಿ.ಬಸವರಾಜ, ಹರೀಶ್ ಕುಮಾರ್ ಪೆಮ್ಡೆ, ಪೂರ್ಣ ಕುರ್ಕುರೆ |

| | |
|---|---|
| **Core Group**<br>National Coordinator: Deepak Ugra<br>Member Secretaries: Upendra Kinjawadekar, Samir Dalwai<br>Members: Apurba Ghosh, CP Bansal, Santosh Soans, Somashekhar Nimbalkar, S Sitaraman | **ಕೋರ್ ಗುಂಪು**<br>ರಾಷ್ಟ್ರೀಯ ಸಂಯೋಜಕ: ದೀಪಕ್ ಉಗ್ರಾ<br>ಸದಸ್ಯ ಕಾರ್ಯದರ್ಶಿಗಳು: ಉಪೇಂದ್ರ ಕಿಂಜವಾಡೇಕರ್, ಸಮೀರ್ ದಲ್ವಾಯ್<br>ಸದಸ್ಯರು: ಅಪೂರ್ಬಾ ಘೋಷ್, ಸಿಪಿ ಬನ್ಸಾಲ್, ಸಂತೋಷ್ ಸೋನ್ಸ್, ಸೋಮಶೇಖರ್ ನಿಂಬಲ್ಕರ್, ಎಸ್ ಸೀತಾರಾಮನ್ |
| Coronavirus Disease-2019 in Children-Information for Parents | ಮಕ್ಕಳಲ್ಲಿ ಕೊರೋನಾ ವೈರಸ್ ಕಾಯಿಲೆ– 2019 –ಪೋಷಕರಿಗೆ ಮಾಹಿತಿ |
| The following information is based on research and evidence available till today (April 2021). | ಈ ಕೆಳಗಿನ ಮಾಹಿತಿಯು (ಏಪ್ರಿಲ್ 2021)ವರೆಗೆ ಲಭ್ಯವಿರುವ ಸಂಶೋ ಧನೆ ಮತ್ತು ಪುರಾವೆಗಳನ್ನು ಆಧರಿಸಿದೆ. |
| **(Q1)** Is second wave more serious than the first wave last year? Why? | **(ಪ್ರಶ್ನೆ–1)** ಎರಡನೇ ಅಲೆ ಹೆಚ್ಚು ಗಂಭೀರವಾಗಿದೆ ಕಳೆದ ವರ್ಷ ಮೊದಲ ಅಲೆಗಿಂತ? ಏಕೆ? |
| Yes, the number of people infected is much higher; proportionately, the total number of children infected has also increased. This is probably due to mutated (changed) virus in a setting where population was casual about precautions to be taken (social distancing, masking, and hand hygiene). It seems to spread very rapidly and we see whole family being affected in short time. | ಹೌದು ಪ್ರಮಾಣದ ಅನುಪಾತದಲ್ಲಿ ನೋಡಿದರೆ ಸೋಂಕಿತ ಜನರು ತುಂಬಾನೆ ಇದ್ದಾರೆ ಹಾಗಾಗಿ ಮಕ್ಕಳ ಸೋಂಕಿನ ಸಂಖ್ಯೆಯೂ ಹೆಚ್ಚಿದೆ.<br>ಇದಕ್ಕೆ ಕಾರಣ ಬಹುಶಃ ರೂಪಾಂತರಿತ (ಬದಲಾದ) ವೈರಸ್ ಇರಬಹುದು. ಜನರು ಮುನ್ನೆಚ್ಚರಿಕೆಗಳ ಬಗ್ಗೆ ನಿರ್ಲಕ್ಷ್ಯತೆಯಿಂದ ಇರುವುದೂ ಕಾರಣ.<br>ಈ ವೈರಸ್ ಅತಿ ವೇಗವಾಗಿ ಹರಡುವಂತೆ ಕಾಣುತ್ತಿದೆ ಮನೆಯಲ್ಲಿ ಒಬ್ಬರು ಸೋಂಕಿತರಾದರೆ ಅಲ್ಪ ಸಮಯದಲ್ಲಿ ಅದು ಇಡೀ ಕುಟುಂಬಕ್ಕೆ ಹರಡುತ್ತಿದೆ. |
| **(Q2)** How can I prevent coronavirus infection/COVID in my child? | **(ಪ್ರಶ್ನೆ–2)** ಕರೋನ ವೈರಸ್ ಸೋಂಕು / ನನ್ನ ಮಗುವಿಗೆ ಹರಡದಂತೆ ಹೇಗೆ ತಡೆಯಬಹುದು? |
| There are no medicines or pills proven to prevent coronavirus infection in any person. Only recently, few vaccines are available, which mainly protect against disease. At present, the vaccines are approved for use in adults only. From 1st May 2021, it will be rolled in for adults above 18 years of age.<br>Only strict precautions of handwashing, proper mask, and social distancing can prevent it.<br>Avoid attending public functions, avoid social gathering, and avoid group play are only ways we can prevent coronavirus disease in children and households. | ಯಾವುದೇ ವ್ಯಕ್ತಿಯಲ್ಲಿ ಕರೋನ ವೈರಸ್ ಸೋಂಕನ್ನು ತಡೆಗಟ್ಟಲು ಔಷಧಿಗಳು ಅಥವಾ ಮಾತ್ರೆಗಳು ಲಭ್ಯವಿರುವುದಿಲ್ಲ. ಇತ್ತೀಚೆಗೆ, ಕೆಲವು ಲಸಿಕೆಗಳು ಲಭ್ಯವಿದೆ, ಅದು ಮುಖ್ಯವಾಗಿ ರೋಗದಿಂದ ರಕ್ಷಿಸುತ್ತದೆ. ಪ್ರಸ್ತುತ, ಲಸಿಕೆಗಳನ್ನು ವಯಸ್ಕರಲ್ಲಿ ಮಾತ್ರ ಬಳಸಲು ಅನುಮೋದಿಸಲಾಗಿದೆ. 1 ಮೇ 2021ರಿಂದ ಇದನ್ನು 18 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಕರಿಗೆ ಕೊಡುತ್ತಿದ್ದಾರೆ.<br>ಹಾಗಾಗಿ ಕಟ್ಟುನಿಟ್ಟಾದ ಮುನ್ನೆಚ್ಚರಿಕೆಗಳಾದ ಕೈತೊಳೆಯುದು, ಸರಿಯಾದ ಮುಖಗವಸು ಧರಿಸುವುದು ಮತ್ತು ಸಾಮಾಜಿಕ ಅಂತರ ಇವುಗಳು ಮಾತ್ರ ಅದನ್ನು ತಡೆಯಬಹುದು<br>ಸಾರ್ವಜನಿಕ ಸಭೆ, ಗುಂಪುಗೂಡುವಿಕೆ, ಗುಂಪಿನಲ್ಲಿ ಆಡುವುದು ಇವುಗಳನ್ನು ಕಟ್ಟುನಿಟ್ಟಾಗಿ ತಡೆದರೆ ಮಾತ್ರ ಮಕ್ಕಳು ಮತ್ತು ವೃದ್ಧರು ಕರೋನಾದಿಂದ ಸೋಂಕಿತರಾಗುವುದನ್ನು ತಡೆಗಟ್ಟಬಹುದು |

| | |
|---|---|
| **(Q3)** Can we know whether fever in child is COVID or otherwise? | **(ಪ್ರಶ್ನೆ–3)** ಮಗುವಿನ ಜ್ವರ ಕೊರೋನಾದ ಜ್ವರವೇ ಅಥವಾ ಬೇರೆಯೇ ಎಂದು ತಿಳಿದುಕೊಳ್ಳಬಹುದೇ |
| No. For common man and even for doctor, it is difficult to know the difference, hence in every fever/cough, coronavirus disease (COVID) should be considered as a possibility especially if a family member is suffering/recently suffered from COVID | ಇಲ್ಲ. ಸಾಮಾನ್ಯ ಜನರಿಗೆ ಮತ್ತು ವೈದ್ಯರಿಗೆ ಸಹ, ವ್ಯತ್ಯಾಸವನ್ನು ತಿಳಿಯುವುದು ಕಷ್ಟ.<br>ಆದ್ದರಿಂದ ಪ್ರತಿ ಜ್ವರ / ಕೆಮ್ಮು, ಕೊರೊನಾ ವೈರಸ್ ರೋಗ (ಕೋವಿಡ್) ಎಂದೇ ಪರಿಗಣಿಸಬೇಕು, ವಿಶೇಷವಾಗಿ ಕುಟುಂಬದ ಸದಸ್ಯ ಕೋವಿಡ್‌ನಿಂದ ಬಳಲುತ್ತಿದ್ದಾರೆ / ಇತ್ತೀಚೆಗೆ ಕುಟುಂಬ ಸದಸ್ಯನು ಕೋವಿಡ್‌ಗೆ ಈಡಾಗಿದ್ದರೆ. |
| **(Q4)** What are the common features of corona infection in children? | **(ಪ್ರಶ್ನೆ–4)**ಮಕ್ಕಳಲ್ಲಿ ಕರೋನಾ ಸೋಂಕು ಇದರ ಸಾಮಾನ್ಯ ಲಕ್ಷಣಗಳು ಯಾವುವು? |
| Cold, mild cough, fever, and body pain are the common symptoms of corona infection. In the second wave, it has been noted that other symptoms such as pain in abdomen, loose motions, and vomiting is also present in children | ಶೀತ, ಸೌಮ್ಯ ಕೆಮ್ಮು, ಜ್ವರ ಮತ್ತು<br>ದೇಹದ ನೋವು<br>ಇವು ಕರೋ ನ ಸಾಮಾನ್ಯ ಲಕ್ಷಣಗಳು.<br>ಎರಡನೇ ಅಲೆಯಲ್ಲಿ ಗಮನಿಸಿದಂತೆ ಮಕ್ಕಳಲ್ಲಿ ಹೊಟ್ಟೆ ನೋವು ವಾಂತಿ–ಬೇಧಿ ಸಾಮಾನ್ಯವಾಗಿ ಕಂಡುಬರುತ್ತಿದೆ. |
| **(Q5)** When do we test the child for coronavirus disease? | **(ಪ್ರಶ್ನೆ–5)** ನಾವು ಮಗುವನ್ನು ಯಾವಾಗ ಕೊರೋನಾ ವೈರಸ್ ಪರೀಕ್ಷೆಗೆ ಒಳಪಡಿಸುತ್ತೇವೆ. |
| Test if family members are positive.<br>Test if the child is symptomatic.<br>Test if fever continues beyond 3 days | –ಕುಟುಂಬ ಸದಸ್ಯರು ಸೋಂಕಿತರಿದ್ದರೆ.<br>–ಜ್ವರವು 3 ದಿನಗಳನ್ನು ಮೀರಿ ಮುಂದುವರಿದರೆ<br>–ಮಗುವಿಗೆ ರೋಗ ಲಕ್ಷಣಗಳು ಕಂಡು ಬಂದರೆ |
| **Q6)** Which test we should do? | **(ಪ್ರಶ್ನೆ–6)** ನಾವು ಯಾವ ಪರೀಕ್ಷೆಯನ್ನು ಮಾಡಿಸಬೇಕು? |
| Reverse transcription polymerase chain reaction (RT-PCR) for coronavirus disease 2019 (COVID-19) and PCR-based nucleic acid amplification test (NAAT) are the preferred tests.<br>- Rapid antigen test (RAT) is second option; a positive is confirmatory. However, a negative test result needs confirmation by PCR.<br>- Chest CT scan is not a routine test for COVID and should only be done when recommended by your doctor | –ರಿವರ್ಸ್ ಟ್ರಾನ್ಸ್ಕ್ರಿಪ್ಷನ್ ಪಾಲಿಮರೇ ಸ್ ಚೈನ್ ರಿಯಾಕ್ಷನ್ (ಆರ್ಟಿ–ಪಿಸಿಆರ್) 2019 (ಸಿಒವಿಐಡಿ –19) ಮತ್ತು ಪಿಸಿಆರ್ ಆಧಾರಿತ ನ್ಯೂಕ್ಲಿಯಿಕ್ ಯಾಸಿಡ್ ಯಾಂಪ್ಲಿಕೇಶನ್ ಟೆಸ್ಟ್ ಆದ್ಯತೆಯ ಪರೀಕ್ಷೆಗಳು.<br>–ರಾಪಿಡ್ ಆಂಟಿಜೆನ್ ಟೆಸ್ಟ್ (ರಾಟ್) ಎರಡನೇ ಆಯ್ಕೆ ಯಾಗಿದೆ; Positive ಬಂದರೆ ದೃಢವಾದಂತೆ. Negative ಬಂದರೆ PCR ಪರೀಕ್ಷೆ ಮಾಡಿಸಿ ದೃಢಪಡಿಸಿಕೊಳ್ಳಬೇಕು.<br>–ಎದೆಯ ಸಿಟಿ ಸ್ಕ್ಯಾನ್ ಕೋವಿಡ್ ವಾಡಿಕೆಯ ಪರೀಕ್ಷೆಯಲ್ಲ ಮತ್ತು ನಿಮ್ಮ ವೈದ್ಯರು ಶಿಫಾರಸು ಮಾಡಿದಾಗ ಮಾತ್ರ ಸ್ಕ್ಯಾನ್ ಮಾಡಿಸಬೇಕು. |
| **(Q7)** What may be the different situations in the family? How to manage them? | **(ಪ್ರಶ್ನೆ–7)** ಕುಟುಂಬದಲ್ಲಿ ವಿಭಿನ್ನ ಸನ್ನಿವೇಶಗಳು ಎಂಥವಿರಬಹುದು? ಅವುಗಳನ್ನು ಹೇಗೆ ನಿರ್ವಹಿಸುವುದು? |

| | |
|---|---|
| Mother and child both positive:<br>Let child be with mother unless mother is too sick and hospitalized. In infant, continue breastfeeding as far as possible and feasible.<br>- Mother positive and child negative: Mother can take care of child if no better option available for child and mother is not too sick/hospitalized. Mother has to follow best possible sanitization, proper mask, and social distancing (SMS) practices.<br>- Child positive parents negative: Still parents can take care of the child in or out of the hospital; however, in such scenarios, the parents should use proper mask/personal protective equipment (PPE) for their protection. Avoid leaving children with COVID suspect status with grandparents. Elderly people are at very high risk of serious disease and unless child's status is definitely corona negative, child should not be left with grandparents. | –ತಾಯಿ ಮತ್ತು ಮಗು ಇಬ್ಬರೂ ಸೋಂಕಿತರು ಮಗು ತಾಯಿಯ ಜೊತೆಗಿರಲಿ ತಾಯಿ ತುಂಬಾ ಅನಾರೋಗ್ಯದಿಂದ ಬಳಲುತ್ತಿದ್ದರೆ ಮತ್ತು ಆಸ್ಪತ್ರೆಗೆ ದಾಖಲಾಗಿದ್ದರೆ ಮಾತ್ರ ಬೇರ್ಪಡಿಸಿ. ಸಾಧ್ಯವಾದಷ್ಟು ಶಿಶುವಿನಲ್ಲಿ ಸ್ತನ್ಯಪಾನ ಮುಂದುವರಿಸಿ.<br>–ತಾಯಿ ಧನಾತ್ಮಕ ಮತ್ತು ತಾಯಿ ತೀವ್ರತರದ ಕಾಯಿಲೆಗೆ ಒಳಗಾಗಿಲ್ಲವೆಂದರೆ ತಾಯಿಯೇ ಮಗುವನ್ನು ಆರೈಕೆ ಮಾಡಬಹುದು. ಆದರೆ, ಕೆಲವೊಂದು ಮುನ್ನೆಚ್ಚರಿಕೆಗಳನ್ನು ತಪ್ಪದೆ ಅನುಸರಿಸಬೇಕು. ಸ್ವಚ್ಚತೆ ಮುಖಗವಸು ಮತ್ತು ಸಾಮಾಜಿಕ ಅಂತರ ಇವುಗಳನ್ನು ತಪ್ಪದೇ ಪಾಲಿಸಬೇಕು.<br>–ಮಕ್ಕಳು Positive ಪೋಷಕರು Negative<br>ಆಸ್ಪತ್ರೆಯ ಒಳಗೆ ಅಥವಾ ಹೊರಗೆ ಸೋಂಕಿತ ಮಗುವನ್ನು ಪೋಷಕರು ನೋಡಿಕೊಳ್ಳಬಹುದು ಅಥವಾ ಪೋಷಕರು ಸರಿಯಾದ ರೀತಿಯಲ್ಲಿ ಮುಖಗವಸು / ವೈಯಕ್ತಿಕ ರಕ್ಷಣಾ ಸಾಧನಗಳನ್ನು (ಪಿಪಿಇ) ಅವರ ರಕ್ಷಣೆಗಾಗಿ ಬಳಸಬೇಕು. ಕೋವಿಡ್ ಶಂಕಿತ ಮಕ್ಕಳನ್ನು ಅಜ್ಜ–ಅಜ್ಜಿಯರೊಂದಿಗೆ ಬಿಡುವುದನ್ನು ತಪ್ಪಿಸಿ.<br>ಹಿರಿಯರು ಗಂಭೀರ ಕಾಯಿಲೆಗೆ ಒಳಗಾಗುವ ಅಪಾಯವನ್ನು ಹೊಂದಿರುತ್ತಾರೆ ಮತ್ತು ಮಗು ಖಂಡಿತವಾಗಿಯೂ ಕೊರೋನಾ ಕಾಯಿಲೆಗೆ ಒಳಪಟ್ಟಿಲ್ಲ ಎಂದು ಖಚಿತ ಆಗುವವರೆಗೂ ಹಿರಿಯರ ಹತ್ತಿರ ಮಗುವನ್ನು ಬಿಡಲೇಬಾರದು. |
| **(Q8)** Is a mask necessary to be worn for children? | **(ಪ್ರಶ್ನೆ–8)** ಮಕ್ಕಳು ಮುಖಗವಸು ಧರಿಸುವುದು ಅವಶ್ಯವೇ ? |
| Yes, masks need to be worn by all children above the age of 2 years [Indian Academy of Pediatrics (IAP) recommendation]. Children <2 years need not use the mask due to safety reasons. | ಹೌದು ಎರಡು ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಮಕ್ಕಳು ಮುಖಗವಸು ಧರಿಸಬೇಕು ಮತ್ತು ಸುಕ್ಷತೆಯ ಕಾರಣ ಎರಡು ವರ್ಷದೊಳಗಿನ ಮಕ್ಕಳು ಮುಖವಸನ್ನು ಧರಿಸಬೇಕಾಗಿಲ್ಲ. |
| **(Q9)** Can children become serious with corona infection? | **(ಪ್ರಶ್ನೆ–9)** ಮಕ್ಕಳಲ್ಲಿ ಕರೋನಾ ಸೋಂಕು ಗಂಭೀರವಾಗಬಹುದೇ? |
| A small proportion of children may develop serious disease, though much less commonly than adults and elderly.<br>- More than 60–70% of infected children are asymptomatic.<br>-Of the remaining symptomatic about 1–2% need ICU treatment. This number is far less than adults. | ಸ್ವಲ್ಪ ಪ್ರಮಾಣದ ಮಕ್ಕಳಲ್ಲಿನ ಸೋಂಕು ಗಂಭೀರ ಸ್ವರೂಪ ಪಡೆದುಕೊಳ್ಳಬಹುದು. ಆದರೂ ಇದು ವಯಸ್ಕರು ಮತ್ತು ಹಿರಿಯರಿಗಿಂತ ಕಡಿಮೆ ಪ್ರಮಾಣದಲ್ಲಿದೆ.<br>–ಸೋಂಕಿತರಲ್ಲಿ 60–70% ಕ್ಕಿಂತ ಹೆಚ್ಚು ಮಕ್ಕಳು ಲಕ್ಷಣರಹಿತರು.<br>–ಉಳಿದ ರೋಗ ಲಕ್ಷಣಗಳಿರುವ ಮಕ್ಕಳಲ್ಲಿ ಸುಮಾರು 1–2% ರಷ್ಟು ಐಸಿಯು ಚಿಕಿತ್ಸೆ ಯ ಅಗತ್ಯವಿದೆ. ಈ ಸಂಖ್ಯೆ ವಯಸ್ಕರಿಗಿಂತ ತೀರಾ ಕಡಿಮೆ. |

| | |
|---|---|
| **(Q10)** Which children are at risk of serious disease? | **(ಪ್ರಶ್ನೆ–10)** ಯಾವ ಮಕ್ಕಳು ತೀವ್ರ ಸ್ವರೂಪದ ಸೋಂಕಿನ ಅಪಾಯಕ್ಕೆ ಸಿಲುಕುತ್ತಾರೆ? |
| Those children with pre-existing major disease… heart, kidney, liver disease, etc., or children with low immunity such as cancers, immunity diseases from birth, etc., obese children are at high risk of serious disease. | ಮೊದಲಿಂದಲೂ ಬಹುದಿನದ ಖಾಯಿಲೆಯಿಂದ ಬಳಲುವ ಮಕ್ಕಳು ಹೃದಯ, ಮೂತ್ರಪಿಂಡ, ಯಕೃತ್ತಿನ ಕಾಯಿಲೆ, ಇತ್ಯಾದಿ ಅಥವಾ ಕಡಿಮೆ ರೋಗನಿರೋಧಕ ಶಕ್ತಿ ಹೊಂದಿರುವ ಮಕ್ಕಳು, ಕ್ಯಾನ್ಸರ್, ಜನನ ರೋಗನಿರೋಧಕ ಕಾಯಿಲೆಯ ಮಕ್ಕಳು, ಬೊಜ್ಜು ಮಕ್ಕಳು ಇತ್ಯಾದಿ ಇವರಲ್ಲಿ ತೀವ್ರ ಸ್ವರೂಪದ ಸೋಂಕಾಗಿ ಮಾರ್ಪಡುವ ಅಪಾಯವಿರುತ್ತದೆ. |
| **(Q11)** How to take advice about care of my COVID positive child? | **(ಪ್ರಶ್ನೆ–11)** ನನ್ನ ಕೋವಿಡ್ ಮಗುವಿನ ಆರೈಕೆಯ ಬಗ್ಗೆ ಹೇಗೆ ಸಲಹೆ ತೆಗೆದುಕೊಳ್ಳುವುದು? |
| It is good to take teleconsultation for your child from your doctor rather than taking him to the clinic. This will prevent spread to others and also reduce pain of traveling and waiting for your child.<br>- You may access information from authentic institutional websites such as Indian Academy of Pediatrics (IAP) website iapindia.org, WHO, AIIMS, PGI, etc.<br>- If any seriousness perceived, child should be taken to the doctor. | –ಮಗುವನ್ನು ಕ್ಲಿನಿಕ್‌ಗೆ ಕರೆದೊಯ್ಯುವ ಬದಲು ನಿಮ್ಮ ಮಗುವಿಗೆ ದೂರಸಂಪರ್ಕದ ಮೂಲಕ ವೈದ್ಯರಿಂದ ಸಲಹೆ ತೆಗೆದುಕೊಳ್ಳುವುದು ಸೂಕ್ತ. ಇದರಿಂದ ರೋಗ ಹರಡುವುದು, ಪ್ರಯಾಣದ ಆಯಾಸ ಮತ್ತು ಕಾಯುವ ನೋವನ್ನು ಕಡಿಮೆ ಮಾಡುತ್ತದೆ.<br>–ನೀವು ಮಾಹಿತಿಯನ್ನು ಅಧಿಕೃತ ಸಾಂಸ್ಥಿಕ ವೆಬ್ ಸೈಟ್‌ಗಳರಿಂದ ಮಾಹಿತಿಯನ್ನು ಪಡೆಯಬಹುದು.<br>–ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (ಐಎಪಿ) ವೆಬ್‌ಸೈಟ್ iapindia.org, WHO, AIIMS, PGI, ಇತ್ಯಾದಿ.<br>–ಮಗುವಿನಲ್ಲಿ ಯಾವುದೇ ರೀತಿಯ ಗಂಭೀರ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯರ ಬಳಿಗೆ ಕರೆದುಕೊಂಡು ಹೋಗಿ. |
| **(Q12)** What is home remedy that I can use for my child? | **(ಪ್ರಶ್ನೆ–12)** ನಾನು ನನ್ನ ಮಗುವಿಗೆ ಬಳಸಬಹುದಾದ ಮನೆಮದ್ದು ಏನು? |
| Record temperature and oxygen saturation with a pulse oximeter if available at home, every 6 hours.<br>- If fever is >100°F, give paracetamol 10–15 mg/kg/dose.<br>- Give plenty of liquids.<br>- Give a soft and light diet.<br>- Maintain hygiene.<br>- One may give vitamin C, zinc to boost overall health and immunity. | –ಮನೆಯಲ್ಲಿ ಪ್ರತಿ 6 ಗಂಟೆಗಳಿಗೊಮ್ಮೆ ತಾಪಮಾನ ಮತ್ತು ನಾಡಿ ಆಕ್ಸಿ ಮೀಟರ್ ನೊಂದಿಗೆ ಆಮ್ಲಜನಕವನ್ನು ರೆಕಾರ್ಡ್ ಮಾಡಿ.<br>–ಜ್ವರ>100 ಡಿಗ್ರಿ ಆಗಿದ್ದರೆ, 10–15 ಮಿಗ್ರಾಂ /ಕೆಜಿ / ಡೋಸ್ ಪ್ಯಾರೆಸಿಟಮಾಲ್ ನೀಡಿ.<br>–ಸಾಕಷ್ಟು ದ್ರವ ಪದಾರ್ಥಗಳನ್ನು ನೀಡಿ.<br>–ಮೃದು ಮತ್ತು ಹಗುರವಾದ ಆಹಾರವನ್ನು ನೀಡಿ.<br>–ನೈರ್ಮಲ್ಯವನ್ನು ಕಾಪಾಡಿಕೊಳ್ಳಿ.<br>–ಒಟ್ಟಾರೆ ಆರೋಗ್ಯ ಮತ್ತು ರೋಗ ನಿರೋಧಕ ಶಕ್ತಿ ಹೆಚ್ಚಿಸಲು ವಿಟಮಿನ್ ಸಿ, ಶಕ್ತಿ ನೀಡಬಹುದು. |
| **(Q13)** What about medicines such as azithromycin, ivermectin, doxycycline, hydroxychloroquine (HCQ), ayurvedic, homeopathic, etc.? | **(ಪ್ರಶ್ನೆ–13)** ಅಜಿಥ್ರೊಮೈಸಿನ್, ಐವರ್ಮೆಕ್ಟಿನ್, ಡಾಕ್ಸಿಸೈಕ್ಲಿನ್, ಹೈಡ್ರಾಕ್ಸಿಕ್ಲೊ? ರೋಕ್ವಿನ್ (ಎಚ್‌ಸಿಕ್ಯು), ಆಯುರ್ವೇದ, ಹೋಮಿಯೋಪತಿ, ಇತ್ಯಾದಿ ಅಂತಹ ಔಷಧಿಗಳ ಬಗ್ಗೆ ಅಭಿಪ್ರಾಯವೇನು? |

| | |
|---|---|
| There is no scientific evidence to use these drugs for treatment of COVID in children. Few of these drugs are used when adults are hospitalized with serious disease. There is no role of these drugs in home treatment. | ಈ ಔಷಧಿಗಳನ್ನು ಕೋವಿಡ್ ಚಿಕಿತ್ಸೆಗಾಗಿ ಮಕ್ಕಳ ಮೇಲೆ ಬಳಸಲು ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಈ ಕೆಲವು ಔಷಧಿಗಳಲನ್ನು ಗಂಭೀರ ರೋಗ ಇರುವ ವಯಸ್ಕರಲ್ಲಿ ಬಳಸಲ್ಪಡುತ್ತವೆ. ಮನೆ ಚಿಕಿತ್ಸೆಯಲ್ಲಿ ಈ ಔಷಧಿಗಳ ಯಾವುದೇ ಪಾತ್ರವಿಲ್ಲ. |
| **(Q14)** When do I consider my child serious? | **(ಪ್ರಶ್ನೆ–14)** ನನ್ನ ಮಗು ತೀ ವ್ರ ಅನಾರೋ ಗ್ಯದಿಂದ ಬಳಲುತ್ತಿದೆ ಎಂದು ನಾನು ಯಾವಾಗ ಪರಿಗಣಿಸಬೇಕು? |
| This is very important to know and following five symptoms or signs need to be monitored at home.<br>1. High fever lasting beyond 4 or 5 days<br>2. Decreased oral intake by child<br>3. Child becoming lethargic<br>4. Increasing respiratory rate<br>5. Oxygen saturation dropping below 95% at home (ensure proper recording with good displayed waves).<br>In such situation, you should rush your child to facility with COVID care. | ಇದನ್ನು ತಿಳಿಯುವುದು ಬಹಳ ಮುಖ್ಯ ಮತ್ತು ಕೆಳಗಿನ ಐದು ಲಕ್ಷಣಗಳು ಅಥವಾ ಚಿನ್ಹೆಗಳನ್ನು ಮನೆಯಲ್ಲಿ ಮೇಲ್ವಿಚಾರಣೆ ಮಾಡಬೇಕಾದ ಅಗತ್ಯವಿದೆ.<br>1. 4–5 ದಿನಗಳಿಗಿಂತ ತೀವ್ರ ಜ್ವರ ಮುಂದುವರೆದರೆ.<br>2. ಮಗುವಿಗೆ ಹಸಿವೆ ಇಲ್ಲದಿದ್ದರೆ.<br>3. ಮಗು ಆಲಸ್ಯದಿಂದಿದ್ದರೆ.<br>4. ಉಸಿರಾಟ ತೀವ್ರವಾದರೆ.<br>5. ಆಮ್ಲಜನಕದ ಪ್ರಮಾಣ 95%ಕ್ಕಿಂತ ಕಡಿಮೆಯಾದರೆ. (ಮನೆಯಲ್ಲಿ ಸರಿಯಾದ ಉತ್ತಮ ಪ್ರದರ್ಶಿ ತ ಅಲೆಗಳ ರೆಕಾರ್ಡಿಂಗ್ ಅನ್ನು ಖಚಿತಪಡಿಸಿಕೊಳ್ಳಿ).<br>ಅಂತಹ ಪರಿಸ್ಥಿತಿಯಲ್ಲಿ, ನೀವು ನಿಮ್ಮ ಮಗುವನ್ನು ಕೋವಿಡ್ ಆರೈಕೆ ಸೌಲಭ್ಯಕ್ಕೆ ಕರೆದೊಯ್ಯಿರಿ. |
| **(Q15)** My child is having chronic disease. Do I continue his steroid treatment/other treatment? | **(ಪ್ರಶ್ನೆ–15)** ನನ್ನ ಮಗುವಿಗೆ ದೀರ್ಘಕಾಲದ ರೋಗ ಇದೆ. ನಾನು ಅವನ ಸ್ಟೀರಾಯ್ಡ್ ಚಿಕಿತ್ಸೆ / ಇತರ ಚಿಕಿತ್ಸೆಯನ್ನು ಮುಂದುವರಿಸಬಹುದೇ? |
| Most of the treatment of pre-existing diseases need not be altered unless your child contracts severe disease. In such children preventive care with SMS as mentioned above and some extra precautions at home to avoid infection is important. If such child contracts infection, it is advisable to consult your doctor for specific advice about ongoing medications. | ಮಗುವಿನಲ್ಲಿ ಕೋವಿಡ್ ಸೋಂಕು ತೀವ್ರ ತರಕ್ಕೆ ತಿರುಗದಿದ್ದರೆ ದೀರ್ಘಕಾಲೀನ ಖಾಯಿಲೆಗೆ ಕೊಡುವ ಯಾವುದೇ ಔಷಧಿಗಳನ್ನು ನಿಲ್ಲಿಸುವ ಅಗತ್ಯವಿಲ್ಲ. ಈ ತರದ ಮಕ್ಕಳಲ್ಲಿ ಮೇಲೆ ತಿಳಿಸಿರುವ ಮುನ್ನೆಚ್ಚರಿಕೆ ಕ್ರಮಗಳ ಜೊತೆಗೆ ಮನೆಯಲ್ಲಿ ಇನ್ನೂ ಹೆಚ್ಚಿನ ಮುಂಜಾಗ್ರತೆಯನ್ನು ವಹಿಸಬೇಕು ಮತ್ತು ಮಕ್ಕಳ ತಜ್ಞರೊಂದಿಗೆ ಸಮಾಲೋಚಿಸಿ ಮುಂದಿನ ಚಿಕಿತ್ಸೆಯನ್ನು ನಿರ್ಣಯಿಸಬೇಕು. |
| **(Q16)** Doctor, we heard about steroids, favipiravir, redes vir, tocilizumab, etc., when do we use them? | **(ಪ್ರಶ್ನೆ–16)** ಡಾಕ್ಟರ್, ನಾವು ಸ್ಟೀರಾಯ್ಡ್ಗಳ ಬಗ್ಗೆ ಕೇಳಿದ್ದೇವೆ, ಫೆವಿಪಿರವಿರ್, ರೆಮ್ಡೆಸಿವಿರ್, ಟೋ ಸಿಲಿಜುಮಾಬ್, ಇತ್ಯಾದಿ, ನಾವು ಅವುಗಳನ್ನು ಯಾವಾಗ ಬಳಸಬೇಕು? |
| These drugs have limited utility in childhood COVID patients. Some are used only in serious patients usually in ICU. So far, they are almost never needed in children with COVID. | ಈ ಔಷಧಿಗಳು ಸೀಮಿತ ಉಪಯುಕ್ತತೆಯನ್ನು ಹೊಂದಿವೆ. ಸಾಮಾನ್ಯವಾಗಿ ಐಸಿಯುನಲ್ಲಿ ಗಂಭೀರವಾಗಿ ಇರುವ ಕೆಲವು ರೋಗಿಗಳ ಮೇಲೆ ಬಳಸಲಾಗುತ್ತದೆ. ಇಲ್ಲಿಯವರೆಗೆ, ಬಹುತೇಕ ಕೋವಿಡ್ ಹೊಂದಿರುವ ಮಕ್ಕಳಲ್ಲಿ ಎಂದಿಗೂ ಉಪಯೋಗಿಸಿಲ್ಲ. |

| | |
|---|---|
| (Q17) My child has tested positive 1 week ago. He is due for his vaccine after 2 weeks. How do I go about it? | ಒಂದು ವಾರದ ಹಿಂದೆ ನನ್ನ ಮಗುವಿಗೆ ಕೊರೋನ ಸೋಂಕು ದೃಢಪಟ್ಟಿದೆ. ಈಗ ಎರಡು ವಾರದ ನಂತರ ನಿಯಮಿತ ಲಸಿಕೆ ಹಾಕಿಸುವುದು ಇದ್ದು ಅದನ್ನು ಹಾಕಿಸಬಹುದೇ. |
| Routine immunization can be continued 2 weeks after child is asymptomatic (of COVID infection).<br>- If child needs some higher medications such as high-dose steroids or tocilizumab which suppresses the components of immunity of patient, immunization needs to be deferred for 3 months after the medication. | –ಮಕ್ಕಳು ಕೋವಿಡ್ ಸೋಂಕು ನಿವಾರಣೆಯಾಗಿ ರೋಗ ಲಕ್ಷಣರಹಿತರಾದ ಎರಡು ವಾರಗಳ ನಂತರ ನಿಯಮಿತ ಲಸಿಕೆಗಳನ್ನು ಹಾಕಬಹುದು.<br>–ಮಗುವಿಗೆ ಕೆಲವು ಹೆಚ್ಚಿನ ಔಷಧಿಗಳ ಅಗತ್ಯವಿದ್ದಾಗ ಉದಾಹರಣೆಗೆ ಹೆಚ್ಚಿನ ಪ್ರಮಾಣದ ಸ್ಟೀರಾಯ್ಡ್‌ಗಳು ಅಥವಾ tocilizumab ಇದು ರೋಗಿಯ ಪ್ರತಿರಕ್ಷೆಯ ಅಂಶಗಳನ್ನು ಕಡಿಮೆ ಮಾಡುವುದರಿಂದ ಅಂತಹ ಸಮಯದಲ್ಲಿ 3 ತಿಂಗಳು ಲಸಿಕೆ ಕೊಡುವುದನ್ನು ಮುಂದೂಡಬೇಕಾಗಿದೆ. |
| **(Q18)** The mother is breastfeeding her baby, can she take COVID vaccine? | **(ಪ್ರಶ್ನೆ–18)** ತಾಯಿ ತನ್ನ ಮಗುವಿಗೆ ಹಾಲುಣಿಸುಸುತ್ತಿದ್ದಾಳೆ, ಅವಳು ಕೋವಿಡ್ ಲಸಿಕೆ ತೆಗೆದುಕೊಳ್ಳಬಹುದೇ? |
| As per the present guidelines, the vaccine is not being given to pregnant and breast -feeding ladies. | ಪ್ರಸ್ತುತ ಮಾರ್ಗ ಸೂಚಿಗಳ ಪ್ರಕಾರ ಸ್ತನ್ಯಪಾನ ಮಾಡುವ ತಾಯಂದಿರಿಗೆ ಲಸಿಕೆ ನೀಡಬಹುದು. |

